(a) YES.

(b) under consideration.

ಶ್ರೀಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಅಧ್ಯಕ್ಷರೆ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದಿದ್ದಕ್ಕೆ ಬಂದಿದೆಯೆಂದು ಹೇಳಿದ್ದಾರೆ. ಅದನ್ನು ಪ್ರಾರಂಭ ಮಾಡಬೇಕು ಎನ್ನುವ ಬಗ್ಗೆ ಪರಿಶೀಲನಾ ಹಂತದಲ್ಲಿದೆಯೆಂದು ಹೇಳಿದ್ದಾರೆ. ಆದ್ದರಿಂದ ಮುಂದಿನ ಸಾಲಿನಲ್ಲಾದರೂ ಅದನ್ನು ಮಾಡುವ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಗುಂಡ್ಲುಪೇಟೆ ನಮ್ಮ ನಜೀರ್‌ಸಾಬ್‌ರವರ ಊರು, ಅವರ ನೆನಪಿನಲ್ಲಾದರೂ ಸಹ ಅದನ್ನು ಮಾಡಿಬಿಡಿ. ಈಗ ಪ್ರಶ್ನೋತ್ತರ ವೇಳೆ ಮುಕ್ತಾಯಗೊಳ್ಳುತ್ತದೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಕೊಡಗು ಜಿಲ್ಲಾ ಪಂಚಾಯಿತಿಗೆ ಹಣ ಬಿಡುಗಡೆ

298(709) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ(ಸೋಮವಾರ ಪೇಟೆ):

ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೊಡಗು ಜಿಲ್ಲಾ ಪಂಚಾಯಿತಿಗೆ 1-4-96 ರಿಂದ 31-1-97ರ ವರೆಗೂ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಹಣವೆಷ್ಟು; (ಪ್ರಾರಾವಾರು ವಿವರಗಳನ್ನು ನೀಡುವುದು)?

ಶ್ರೀ. ಎಂ.ಪಿ.ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

(ಅ) ರಾಜ್ಯ ಸರ್ಕಾರವು ಕೊಡಗು ಜಿಲ್ಲಾ ಪಂಚಾಯಿತಿಗೆ 1-4-96 ರಿಂದ 31-1-97ರ ವರೆಗೆ ಯೋಜನೆ ಅಡಿಯಲ್ಲಿ ರೂ. 1320.59ಲಕ್ಷ ಹಾಗೂ ಯೋಜನೇತರ ಅಡಿಯಲ್ಲಿ ರೂ. 2183.47 ಲಕ್ಷಗಳನ್ನು ಬಿಡುಗಡೆ ಮಾಡಿದೆ. (ಪ್ರಾರಾವಾರು ವಿವರಗಳನ್ನು ಲಗತ್ತಿಸಿದೆ).

ಕ್ರ.ಸಂ.	ಪ್ರಧಾನ ಲೆಕ್ಕಶೀರ್ಷಿಕೆ		ಯೋಜನೆ (ರೂ. ಲಕ್ಷಗಳಲ್ಲಿ) ಸರ್ಕಾರದಿಂದ ಬಂದ ಹಣ
1.	2202-01	ಪ್ರಾಥಮಿಕ ಶಿಕ್ಷಣ	63.61
2.	2202-02	ಸೆಕೆಂಡರಿ ಶಿಕ್ಷಣ	47.47
3.	2202-05	ಹಿಂದಿ ಶಿಕ್ಷಕರ ನೇಮಕಾತಿ	0.34
4.	2202-04	ವಯಸ್ಕರ ಶಿಕ್ಷಣ	2.80
5.	2204	ಕ್ರೀಡೆ ಮತ್ತು ಯುವಜನ ಸೇವೆ	17.64

6.	2210	ವೈದ್ಯಕೀಯ ಮತ್ತು ಜನಾರೋಗ್ಯ	97.35
7.	2211	ಕುಟುಂಬ ಕಲ್ಯಾಣ	46.72
8.	2215	ನೀರು ಸರಬರಾಜು ಮತ್ತು ನೈರ್ಮಲ್ಯ	175.06
9.	2225-01	ಸಮಾಜ ಕಲ್ಯಾಣ	30.81
10.	2225-01	ವಿಶೇಷ ಘಟಕ ಯೋಜನೆ	51.35
11.	2225-02	ಗಿರಿಜನ ಕಲ್ಯಾಣ	5.87
12.	2225-02	ಗಿರಿಜನ ಉಪಯೋಜನೆ	49.24
13.	2225-03	ಹಿಂದುಳಿದ ವರ್ಗಗಳ ಕಲ್ಯಾಣ	19.24
14.	2235	ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ	29.15
15.	2236	ಪೌಷ್ಟಿಕ ಆಹಾರ	17.64
16.	2401	ಕೃಷಿ	4.28
17.	2401-2	ತೋಟಗಾರಿಕೆ	8.03
18.	2403	ಪಶುಸಂಗೋಪನೆ	37.79
19.	2405	ಮೀನುಗಾರಿಕೆ	4.99
20.	2406	ಅರಣ್ಯ ಮತ್ತು ವನ್ಯ ಜೀವನ	14.82
21.	2435	ಸಹಕಾರ	5.08
22.	2501	ಜಿಲ್ಲಾಮಟ್ಟ ಆಡಳಿತ ವೆಚ್ಚ	10.44
23.	2501	ಐ.ಆರ್.ಡಿ.ಪಿ	70.52
24.	2501	ಟ್ರೈಸಂ ತರಬೇತಿ	3.94
25.	2501	ಡ್ವಕ	-
26.	2501	ಸಮಗ್ರ ಇಂಧನ ಕಾರ್ಯಕ್ರಮ	6.00
27.	2505	ಜೆ ಆರ್ ವೈ	229.58
28.	2515	ತಾಲ್ಲೂಕು ಪಂಚಾಯತ್‌ಗಳಿಗೆ ಅನುದಾನ	8.78
29.	2515	ತಾಲ್ಲೂಕು ಯೋಜನಾ ಘಟಕ ಸ್ಥಾಪನೆ	-
30.	2515	ಜಿಲ್ಲಾ ಪಂಚಾಯತ್ ಅನುದಾನ ನಿರ್ವಹಣೆ	33.75
31.	2515	ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಣೆ-ಅಧಿಕಾರಿ ವೇತನ	14.94

32.	2515	ಗ್ರಾಮ ಪಂಚಾಯತ್‌ಗಳಿಗೆ ಅನುದಾನಗಳು	50.50
33.	2515	ಜಿಲ್ಲಾ ಮಟ್ಟದ ಉಪಯೋಜನೆ	6.16
34.	2551	ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ	60.22
35.	2702	ಸಣ್ಣ ನೀರಾವರಿ	11.87
36.	2851	ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮಗಳು	6.61
37.	2851	ರೇಷ್ಮೆ ವ್ಯವಸಾಯೋದ್ಯಮ	7.96
38.	2851	ಕೈಮಗ್ಗ ಮತ್ತು ಜವಳಿ	1.99
39.	3054	ರಸ್ತೆ ಮತ್ತು ಸೇತುವೆಗಳು	66.51
40.	3451	ಸಚಿವಾಲಯದ ಆರ್ಥಿಕ ಸೇವೆಗಳು	1.70
			ಒಟ್ಟು: 1320.59

ಕ್ರ.ಸಂ.		ಪ್ರಧಾನ ಲೆಕ್ಕ ಶೀರ್ಷಿಕೆ	ಯೋಜನೇತರ (ರೂ. ಲಕ್ಷಗಳಲ್ಲಿ) ಸರ್ಕಾರದಿಂದ ಬಂದ ಹಣ
1.	2059	ಲೋಕೋಪಯೋಗಿ ಕಾಮಗಾರಿಗಳು	66.80
2.	2202-01	ಪ್ರಾಥಮಿಕ ಶಿಕ್ಷಣ	830.10
3.	2202-02	ಸೆಕೆಂಡರಿ ಶಿಕ್ಷಣ	517.60
4.	2204	ಕ್ರೀಡೆ ಮತ್ತು ಯುವಜನ ಸೇವೆಗಳು	3.50
5.	2210	ವೈದ್ಯಕೀಯ ಮತ್ತು ಜನಾರೋಗ್ಯ	200.50
6.	2215	ನೀರು ಸರಬರಾಜು ಮತ್ತು ನೈರ್ಮಲ್ಯ	7.40
7.	2225-01	ಪರಿಶಿಷ್ಟ ಜಾತಿಯತ ಕಲ್ಯಾಣ	70.60
8.	2225-02	ಗಿರಿಜನ ಕಲ್ಯಾಣ	61.56
9.	2225-03	ಹಿಂದುಳಿದ ವರ್ಗಗಳ ಕಲ್ಯಾಣ	57.90
10.	2235	ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ	21.32
11.	2236	ಪೌಷ್ಟಿಕ ಆಹಾರ	58.30
12.	2401	ಸಸ್ಯ ಸಂಗೋಪನೆ-ಕೃಷಿ	48.90

13.	2401	ಸಸ್ಯ ಸಂಗೋಪನೆ-ತೋಟಗಾರಿಕೆ	18.60
14.	2402	ಭೂಸಾರ ಮತ್ತು ಜನರಕ್ಷಣೆ	1.20
15.	2403	ಪಶುಸಂಗೋಪನೆ	69.60
16.	2405	ಮೀನುಗಾರಿಕೆ	6.60
17.	2515	ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು	30.69
18.	2702	ಸಣ್ಣ ನೀರಾವರಿ	21.60
19.	2702	ಅಂತರ್ಜಲಾನ್ವೇಷಣೆ	5.50
20.	2851	ಖಾದಿ ಮತ್ತು ಗ್ರಾಮೋದ್ಯೋಗ	11.40
21.	2851	ರೇಷ್ಮೆ ವ್ಯವಸಾಯೋದ್ಯಮ	12.60
22.	3054	ರಸ್ತೆ ಮತ್ತು ಸೇತುವೆಗಳು	56.40
23.	ಸಚಿವಾಯಲ ಆರ್ಥಿಕ ಸೇವೆಗಳು		4.80
			ಒಟ್ಟು: 2183.47

ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯಿಂದ ಕಾಫಿ ಬೆಳೆಗಾರರಿಗೆ ಉಂಟಾಗಿರುವ ತೊಂದರೆ.

299(451) ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಸೋಮವಾರ ಪೇಟೆ):

ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಮ ಮಂಡಳಿಯಿಂದ ಕಾಫಿ ಬೆಳೆಗಾರರಿಗೆ ಪರವಾನಗೆ ವಿತರಿಸುವ ಕಾರಣಕ್ಕಾಗಿ ಆಗುತ್ತಿರುವ ಕಿರುಕುಳವು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಸದರಿ ಕಿರುಕುಳವನ್ನು ತಪ್ಪಿಸಲು ಪರವಾನಗೆ ತೆಗೆದುಕೊಳ್ಳುವುದನ್ನು ಕಡ್ಡಾಯ ಮಾಡದೇ ಇರಲು ಸರ್ಕಾರ ಏನಾದರೂ ಯೋಚಿಸಿದೆಯೇ?

ಶ್ರೀ ಬಸವರಾಜ ನೀ.ಶಿವಣ್ಣನವರ್

(ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು.)

ಅ) ಪರಿಸರ ಮಾಲಿನ್ಯ ನಿಯಂತ್ರಣ ಕ್ರಮ ಕೈಗೊಂಡಿದ್ದರಿಂದ ಅನಾನೂಕೂಲವಾಗಿದೆ ಎಂದು ದೂರು ಬಂದಿವೆ.